
Vidyavardhaka Sangha (R)
Vidyavardhaka First Grade College,
Sheshadri Iyer Road, Mysuru
NATIONAL SERVICE SCHEME
Celebrating Golden Jubilee Year
HAPPY
NSS DAY
24th September, 2019
1969-2019
ಮುಖ್ಯ ಅತಿಥಿಗಳು
ಡಾ.ಕೆ.ಕಾಳಚೆನ್ನೇಗೌಡ
ವಿಶ್ರಾಂತ ಸಂಯೋಜನಾಧಿಕಾರಿಗಳು
ರಾ.ಸೇ.ಯೋ, ಮೈಸೂರು ವಿಶ್ವವಿದ್ಯಾನಿಲಯ ಹಾಗು
ವಿಶ್ರಾಂತ ಪ್ರಾಂಶುಪಾಲರು, ಮಹಾರಾಜ ಕಾಲೇಜು
ಮೈಸೂರು.
ಅಧ್ಯಕ್ಷತೆ
ಡಾ.ಎಸ್ ಮರೀಗೌಡ, ಪ್ರಾಚಾರ್ಯರು
ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು
ಮೈಸೂರು
ಎಲ್ಲರಿಗೂ ಸ್ವಾಗತ
Unity is the secret of social progress
& service to society is the means to promote it...
ಪ್ರೊ. ಸತೀಶ್ ಟಿ
ರಾ.ಸೇ.ಯೋ. ಕಾರ್ಯಕ್ರಮಾಧಿಕಾರಿ
ರಾ.ಸೇ.ಯೋ. ಸ್ವಯಂ ಸೇವಕರು
ಸಲಹಾಸಮಿತಿ, ಅಧ್ಯಾಪಕರು ಹಾಗೂ ಅಧ್ಯಾಪಕೇತರರು
Date: 24-09-2019
Time: 11.00 AM
Venue
Sri P.M Chikkaboraiah Auditorium


Vidyavardhaka Sangha (R)
Vidyavardhaka First Grade College,
Sheshadri Iyer Road, Mysuru
NATIONAL SERVICE SCHEME
Celebrating Golden Jubilee Year
HAPPY
NSS DAY
ಡಾ.ಕೆ.ಕಾಳಚೆನ್ನೇಗೌಡ

Vidyavardhaka First Grade College, Mysuru – Events, Special Talks, Seminars and Activities page






















**ರಾ.ಸೇ.ಯೋ ದಿನಾಚರಣೆ**

**"ವಿದ್ಯಾರ್ಥಿಗಳು ತಮ್ಮ ಜ್ಞಾನ ವಿಕಾಸಕ್ಕೆ ಬೇಕಾಗಿರುವ ಕುತೂಹಲವನ್ನು ಬೆಳೆಸಿಕೊಳ್ಳಬೇಕು"**

**- ಡಾ.ಕೆ.ಕಾಳಚೆನ್ನೇಗೌಡ**

ವಿದ್ಯಾರ್ಥಿಗಳು ತಮ್ಮ ಸುತ್ತಮುತ್ತ ಪರಿಸರದಲ್ಲಿ ನಡೆಯುವ ಘಟನೆಗಳನ್ನು ನೋಡಿ, ಕೇಳಿ ಹಾಗೂ ಓದಿ ತಿಳಿದುಕೊಳ್ಳುವ ಕುತೂಹಲ ಎಲ್ಲರಲ್ಲಿಯೂ ಸರ್ವೇಸಾಮಾನ್ಯವಾಗಿದೆ. ವಿದ್ಯಾರ್ಥಿಗಳು ತಮ್ಮ ಜ್ಞಾನ ವಿಕಾಸಕ್ಕೆ ಬೇಕಾದ ಕುತೂಹಲ ಗುಣವನ್ನು ಬೆಳೆಸಿಕೊಳ್ಳಬೇಕು ಎಂದು ಮೈಸೂರು ವಿಶ್ವವಿದ್ಯಾನಿಲಯ ರಾಷ್ಟ್ರೀಯ ಸೇವಾ ಯೋಜನೆಯ ವಿಶ್ರಾಂತ ಸಂಯೋಜನಾಧಿಕಾರಿಗಳು ಹಾಗೂ ಮಹಾರಾಜ ಕಾಲೇಜಿನ ವಿಶ್ರಾಂತ ಪ್ರಾಂಶುಪಾಲರಾದ ಡಾ.ಕೆ.ಕಾಳಚನ್ನೇಗೌಡರವರು ಅಭಿಪ್ರಾಯ ಪಟ್ಟರು.

ನಗರದ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ಇಂದು ರಾಷ್ಟ್ರೀಯ ಸೇವಾ ಯೋಜನೆಯ 51ನೇ ವಾರ್ಷಿಕೋತ್ಸವದ ಅಂಗವಾಗಿ ಏರ್ಪಡಿಸಲಾಗಿದ್ದ ಸಮಾರಂಭವನ್ನು ಸಸಿಗೆ ನೀರೆರೆಯುವ ಮೂಲಕ ಉದ್ಘಾಟಿಸಿ ಮಾತನಾಡುತ್ತಿದ್ದರು. ಇದೇ ವೇಳೆ ಗುರುರಾಜ ಕರ್ಜಗಿ ಅವರ ಉದಾಹರಣೆಯನ್ನು ನೀಡಿ ಅವರು ಸಾಮಾನ್ಯರಲ್ಲಿ ಅಸಾಮಾನ್ಯರಾದ ವ್ಯಕ್ತಿಗಳ ಪರಿಚಯವನ್ನು ಕರುಣಾಳು ಬಾ ಬೆಳಕೆ ಎಂಬ ವಾಚನ ಸರಣಿಯ ಮೂಲಕ ಮಾಡಿಕೊಟ್ಟು ಇಂದಿನ ಜನತೆಗೆ ಸ್ಫೂರ್ತಿಯ ಸೆಲೆಯಾಗಿದ್ದಾರೆ ಎಂದು ವಿವರಿಸಿದರು. ವಿದ್ಯಾರ್ಥಿಗಳ ಜ್ಞಾನಾರ್ಜನೆಗೆ ಇಂದು ವಿಪುಲ ಅವಕಾಶಗಳಿರುವುದರಿಂದ ಅವರ ಕನಸುಗಳನ್ನು ನನಸು ಮಾಡಿಕೊಳ್ಳುವುದು ಸುಲಭ ಸಾಧ್ಯವಾಗಿದೆ. ರಾಷ್ಟ್ರೀಯ ಸ್ವಯಂ ಸೇವಕರು ಶ್ರಮಾದಾನದ ಜೊತೆಗೆ ಹಲವಾರು ಪುಸ್ತಕಗಳು ಹಾಗೂ ದಿನಪತ್ರಿಕೆಗಳನ್ನು ಓದುವ ಹವ್ಯಾಸವನ್ನು ಬೆಳೆಸಿಕೊಳ್ಳಬೇಕು.

ಅದರ ಮೂಲಕ ತಮ್ಮ ಜ್ಞಾನಾರ್ಜನೆಯನ್ನು ಉತ್ತಮಗೊಳಿಸಿಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಡಾ.ಎಸ್.ಮರೀಗೌಡರವರು ಅಧ್ಯಕ್ಷೀಯ ನುಡಿಗಳನ್ನಾಡಿದರು. ರಾ.ಸೇ.ಯೋ ಕಾರ್ಯಕ್ರಮಾಧಿಕಾರಿಗಳಾದ ಪ್ರೊ.ಸತೀಶ್.ಟಿ ಅವರು ಸ್ವಾಗತಿಸಿದ ಕಾರ್ಯಕ್ರಮವನ್ನು ವಿದ್ಯಾರ್ಥಿ ಹಿದಾಯತ್ ನಿರೂಪಿಸಿ ಕಿರಣ್‌ಕುಮಾರ್ ವಂದಿಸಿದರು. ಕಾರ್ಯಕ್ರಮದಲ್ಲಿ ಬೋಧಕರು, ಬೋಧಕೇತರರು ಹಾಗೂ ರಾ.ಸೇ.ಯೋ ಸ್ವಯಂ ಸೇವಕರು ಭಾಗವಹಿಸಿದ್ದರು.















Vidyavardhaka First Grade College, Mysuru – Events, Special Talks, Seminars and Activities page













